ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಜಿಲ್ಲೆ, ಯಾದಗಿರಿ

(ದೂ: 08473-25700 ಫ್ಯಾಕ್ಸ್:08473-253701 E-mail Id: adcydg123@gmail.com

ದಿನಾಂಕ: 11 -10-2019

ಸಂ/ಕಂ/ಕೆ.ಕೆ.ಆರ್.ಡಿ.ಬಿ/ಸಿ.ಆರ್-20/2018-19

## ಪತ್ರಿಕಾ ಪ್ರಕಟಣೆ

ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಕೋಶದಲ್ಲಿ ಒಬ್ಬ ತಾಂತ್ರಿಕ ಸಲಹೆಗಾರರ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಕುರಿತು.

ಉಲ್ಲೇಖ: ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳ, ಕಲಬುರಗಿ ರವರ ನಡವಳಿ ಆದೇಶ ಸಂ/ಹೈಕಪ್ರಅಮಂ/ಉಪಸಮಿತಿ/07/2014-15 ದಿನಾಂಕ:18-09-2018.

((o))

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಕೋಶದಲ್ಲಿ ಒಬ್ಬ ತಾಂತ್ರಿಕ ಸಲಹೆಗಾರರ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಭರ್ತಿ ಮಾಡಲು ಉಲ್ಲೇಖಿತ ಆದೇಶದ ಮೂಲಕ ಮಂಜೂರಾತಿ ನೀಡಲಾಗಿರುತ್ತದೆ. ಪ್ರಯುಕ್ತ ಸದರಿ ಹುದ್ದೆಗಾಗಿ ಅರ್ಹ ನಿವೃತ್ತ ಅರ್ಜಿದಾರರು (ನಿವೃತ್ತ ಸರ್ಕಾರಿ ನೌಕರರು ಮಾತ್ರ) ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 -10-2019 ಸಮಯ 17:30 ವರೆಗೆ ನಿಗದಿಪಡಿಸಲಾಗಿರುತ್ತದೆ ಹಾಗೂ ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಮೌಲ್ಯಮಾಪನ ಹಾಗೂ ಇತರೆ ಅರ್ಹತೆಯ ವಿವರ ಈ ಕೆಳಗಿನಂತಿದೆ.

**Qualification, Experience & Other Conditions**

1. ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ಸರ್ಕಾರಿ ಹುದ್ದೆಯಲ್ಲಿ ಅಧೀಕ್ಷಕ ಅಭಿಯಂತರರು ಅಥವಾ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರಬೇಕು.
2. ಅರ್ಜಿ ಸಲ್ಲಿಸುವ ಅರ್ಜಿದಾರರ ವಯಸ್ಸಿನ ಗರಿಷ್ಠ ವಯೋಮಿತಿ 65 ಇರತಕ್ಕದ್ದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ಸರ್ಕಾರಿ ಸೇವಾ ಅವಧಿಯಲ್ಲಿ ಯಾವುದೇ ಇಲಾಖಾ ವಿಚಾರಣೆ ಇರಕೂಡದು.
4. ಅರ್ಜಿ ಸಲ್ಲಿಸಿ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗಳಿಗೆ ಯಾವುದೇ ವಾಹನದ ಸೌಕರ್ಯ ಒದಗಿಸಲಾಗುವುದಿಲ್ಲ.
5. ಆಯ್ಕೆಯಾಗಿ ಕೋಶದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಯಾವುದೇ ರೀತಿಯಾಗಿ ಗಣಕಯಂತ್ರ, ಪ್ರಿಂಟರ್, ಫ್ಯಾಕ್ಸ್ ಹಾಗೂ ಇನ್ನಿತರೆ ಉಪಕರಣಗಳನ್ನು ಪ್ರತ್ಯೇಕವಾಗಿ ನೀಡಲಾಗುವುದಿಲ್ಲ. ಕೋಶದಲ್ಲಿ ಲಭ್ಯವಿರುವ ಸಾಮಗ್ರಿಗಳನ್ನೇ ಉಪಯೋಗಿಸಿ ಕಾರ್ಯ ನಿರ್ವಹಿಸತಕ್ಕದ್ದು.
6. ಅರ್ಜಿ ಸಲ್ಲಿಸಿ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಯು ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಪಂಚಾಯತ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಕೆ.ಕೆ.ಆರ್.ಡಿ.ಬಿ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಾಂತ್ರಿಕವಾಗಿ ಪರಿಶೀಲಿಸುವುದು. ಅನುಷ್ಠಾನ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ನೀಡುವ ಆದೇಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
7. ಅರ್ಜಿ ಸಲ್ಲಿಸಿ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗಳು ಮೇಲಾಧಿಕಾರಿಗಳು ತೆಗೆದುಕೊಳ್ಳುವ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವುದು ಹಾಗೂ ಕಾಮಗಾರಿಗಳ ಕುರಿತು ಪ್ರಗತಿ ವರದಿಯನ್ನು ಕಾಲ ಕಾಲಕ್ಕೆ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
8. ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಯವರಿಗೆ ಮಾಸಿಕ ಸಂಭಾವನೆಯನ್ನು ಮಂಡಳಿಯ ಆಡಳಿತ ವೆಚ್ಚದಡಿಯಲ್ಲಿ ಮಾತ್ರ ಮಂಡಳಿಯಿಂದ ಅನುದಾನ ಬಿಡುಗಡೆಯಾದ ನಂತರವೇ ಭರಿಸಲಾಗುವುದು. ಈ ಕಾರ್ಯಾಲಯದಿಂದ ಸಂಭಾವನೆಯನ್ನು ಪಾವತಿಸಲು ಪ್ರತ್ಯೇಕವಾಗಿ ಅನುದಾನ ಲಭ್ಯವಿರುವುದಿಲ್ಲ.

**Remuneration**

➢ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗೆ ನಿಗದಿಪಡಿಸಲಾದ ಮಾಸಿಕ ಗೌರವಧನ ರೂ: 40,000/- ಗಳನ್ನು ಮಾತ್ರ ಪಾವತಿಸಲಾಗುವುದು ಹಾಗೂ ಯಾವುದೇ ರೀತಿಯಾಗಿ ಪ್ರಯಾಣ ಹಾಗೂ ಇತರೆ ಭತ್ಯೆಗಳನ್ನು ನೀಡಲಾಗುವುದಿಲ್ಲ.

11/10/19

ಜಿಲ್ಲಾಧಿಕಾರಿಗಳು
ಯಾದಗಿರಿ

ಗೆ,
ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಯಾದಗಿರಿ ಇವರಿಗೆ ಕಳುಹಿಸುತ್ತಾ, ಸದರಿ ಪ್ರಕಟಣೆಯನ್ನು ಉಚಿತವಾಗಿ ರಾಜ್ಯ ಆವೃತ್ತಿ, ವಿಭಾಗ ಆವೃತ್ತಿ ಹಾಗೂ ಸ್ಥಳೀಯ ಆವೃತ್ತಿಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ತಿಳಿಸಿದೆ.

**ಪ್ರತಿಯನ್ನು:**

1. ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ರವರಿಗೆ ಮಾಹಿತಿಗಾಗಿ.
2. DIO, NIC Yadgir ಇವರಿಗೆ ಯಾದಗಿರಿ ಜಿಲ್ಲೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ರವಾನಿಸಿದೆ.
3. ಸಹಾಯಕ ಆಯುಕ್ತರು ಯಾದಗಿರಿ ಇವರಿಗೆ ಕೂಡುತ್ತಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಚೂರ ಪಡಿಸಲು ತಿಳಿಸಿದೆ.
4. ತಹಶೀಲ್ದಾರ ಯಾದಗಿರಿ/ಗುರುಮಿಠಕಲ್/ಶಹಾಪುರ/ವಡಗೇರಾ/ಸುರಪುರ/ಹುಣಸಗಿ ಇವರಿಗೆ ಕೂಡುತ್ತಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಚೂರ ಪಡಿಸಲು ತಿಳಿಸಿದೆ.
5. ಕಚೇರಿಯ ಸೂಚನಾ ಫಲಕಕ್ಕೆ.

Scanned by CamScanner